ಹೋಗುವುದೆಂದು ತೀರ್ಮಾನಿಸಿದರು. ಆ ಕ್ಷಣಕ್ಕಾಗಿ ನಟ ರೋಮಾಂಚಿತನಾಗಿದ್ದ.

ಮುಂಜಾನೆಯೇ ಪತ್ರಿಕೆಯ ಮುಖಪುಟದಲ್ಲಿ ದೊಡ್ಡ ಜಾಹೀರಾತು. ರಿಮೇದಿ ಜಾತಿಯ ಸಮಪಾಲು ಹೋರಾಟದವರ ಬೃಹತ್ ಪ್ರತಿಭಟನೆ, ಎರಡು ಲಕ್ಷಕ್ಕೂ ಹೆಚ್ಚು ಜನ ಸೇರುವ ನಿರೀಕ್ಷೆಯಿದೆ ಇತ್ಯಾದಿ. ಈ ಚಳವಳಿಗಾರರಿಗೆ ತಮ್ಮ ಹಕ್ಕು ಮಂಡಿಸಲು ಪ್ರೇಮಿಗಳ ದಿನ ಆದರೇನಂತೆ, ಇನ್ನೊಂದಾದರೇನಂತೆ. ಅದರಂತೆ ಫೆಬ್ರುವರಿ ಹದಿನಾಲ್ಕರಂದೇ ಫ್ರೀಡಂ ಪಾರ್ಕ್‌ನಲ್ಲಿ ದೊಡ್ಡ ರ್‍ಯಾಲಿ ನಿಗದಿಯಾಗಿತ್ತು. ಪತ್ರಿಕೆ ಓದಿದ ರಿಮೇದಿ ಜಾತಿಯ ವಿದ್ಯಾರ್ಥಿಗಳು ನಾವಂತೂ ನಾಳೆ ಇಡೀ ದಿನ ಫ್ರೀಡಂ ಪಾರ್ಕ್‌ನಲ್ಲಿ ಇರುತ್ತೇವೆ ಇತ್ಯಾದಿ ಮಾತಾಡಿಕೊಳ್ಳುತ್ತಿದ್ದರು. ಕೆಲವರು ನಾವು ಇಲ್ಲಿಂದ ಬ್ಯಾನರ್ ಅದು ಇದು ಮಾಡಿಕೊಂಡು ಹೋಗೋಣ. ಅಲ್ಲಿ ನಮ್ಮೂರಿನಿಂದ ಬಂದಿರುವವರು ಸಿಗುತ್ತಾರೆ ಎಂದು ಚರ್ಚಿಸುತ್ತಿದ್ದರು. ನಟನಿದ್ದ ರೂಮಿಗೆ ಎಡತಾಕುತ್ತಿದ್ದ ಹುಡುಗರು, 'ಹೆಂಗಪ್ಪ ನೀನು ನಾಳೆ, ಎಷ್ಟೊತ್ತಿಗೆ ಹೊರಡ್ತಿಯ' ಇತ್ಯಾದಿ ಕೇಳುತ್ತಿದ್ದರು. ನಟ ಒಬ್ಬೊಬ್ಬರಿಗೆ ಒಂದೊಂದು ಥರ ಹೇಳಿ ಸಾಗಾಕುತ್ತಿದ್ದ. ನಟನ ಆಸಕ್ತಿ ನಾಳೆ ನಂದಿಬೆಟ್ಟದಲ್ಲಿ ಲಲಿತಾಳೊಂದಿಗೆ ಹೇಗೆ ಮಾತಿಗಿಳಿಯುವುದು, ಅದನ್ನು ಪ್ರಸ್ತಾಪ ಮಾಡುವುದು ಹೇಗೆ, ಎಲ್ಲವೂ ಅಂದುಕೊಂಡಂತೆ ಆದರೆ ಆ ಪರಿಸ್ಥಿತಿಯನ್ನು ನಿಭಾಯಿಸುವುದು ಹೇಗೆ ಇತ್ಯಾದಿಯಾಗಿ ಪುಳಕಗೊಳ್ಳುತ್ತಿದ್ದ.

ನಟ ಬುದ್ಧಿ ಬಂದಾಗಿನಿಂದಲೂ ತೊಡಗಿಕೊಂಡಿದ್ದ ಸಮಪಾಲು ಹೋರಾಟದ ನಿರ್ಣಾಯಕ ಹೋರಾಟ ಇದು ಎಂದೇ ಬಿಂಬಿಸಲಾಗಿತ್ತು. ಆಶ್ಚರ್ಯವೆಂದರೆ, ನಟನಿರುವ ಊರಿನಲ್ಲೆ ಇದು ಜರುಗುತ್ತಿತ್ತು. ನಟ ಇಂಥ ಅದೆಷ್ಟೋ ಹೋರಾಟಕ್ಕಾಗಿ ರಾಜ್ಯದ ಮೂಲೆ ಮೂಲೆಗೆ ಹೋಗಿ ಬಂದದ್ದಿದೆ. ಇಂಥ ಹೊತ್ತಿನಲ್ಲಿ ತಾನು ಇಲ್ಲಿರದೆ ನಂದಿ ಬೆಟ್ಟದಲ್ಲಿ, ಅದರಲ್ಲೂ ಇದರ ವಿರೋಧಿ ಹೋರಾಟದ ಮುಂಚೂಣಿ ನಾಯಕನೊಬ್ಬನ ತಂಗಿ ಜೊತೆಯಲ್ಲಿ ಇದ್ದರೆ ಇದು ತಾನು ಈವರೆಗೆ ನಂಬಿಕೊಂಡು ಬಂದ ಸಿದ್ಧಾಂತದ ಸೋಲಲ್ಲವೆ ಎಂದು ನಟ ಒಮ್ಮೆ ಅಂದುಕೊಂಡ. ತಕ್ಷಣವೇ ಇಂತಹ ನೂರಾರು ಹೋರಾಟಗಳನ್ನ ಕಂಡಿದ್ದೇನೆ, ಇದೊಂದರಲ್ಲಿ ನಾನಿರದಿದ್ದರೆ ಅಂತ ಪ್ರಮಾದವೇನೂ ಆಗುವುದಿಲ್ಲ. ಅದೂ ಪ್ರೀತಿಯ ಕಾರಣಕ್ಕಲ್ಲವೆ, ಪ್ರೀತಿಗೆ ಎಲ್ಲವನ್ನೂ ಜಯಿಸಿಕೊಳ್ಳುವ ಶಕ್ತಿ ಇದೆ ಎಂದು ಸಮಾಧಾನ ಪಟ್ಟುಕೊಳ್ಳುತ್ತಿದ್ದ. ಇದೇ ಗೊಂದಲದಲ್ಲಿರುವಾಗ ಮಧ್ಯಾಹ್ನ ರಾಯಚೂರಿನ

